STD
22/2/2022

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಅರವಿಂದಕುಮಾರ್ ಅರಳಿ |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 680 |
| ಉತ್ತರಿಸಬೇಕಾದ ದಿನಾಂಕ | : | 22-02-2022 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಕಲಂ 371(ಜೆ) ಅಡಿಯಲ್ಲಿ ನೌಕರರ ವೃಂದ ಮತ್ತು ನೇಮಕಾತಿ ನಿಯಮ ರಚನೆ ಮಾಡಿ ಪದೋನ್ನತಿ ನೀಡಲಾಗಿದೆಯೇ; ವೃಂದ ರಚನೆ ಮಾಡಿ ಪದೋನ್ನತಿ ನೀಡಿಲ್ಲದಿರುವ ಸಿಬ್ಬಂದಿಗಳ ವಿವರ ನೀಡುವುದು; | ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು ಸಿಬ್ಬಂದಿಗಳ ನೇಮಕಾತಿ ಹಾಗೂ ಪದೋನ್ನತಿಗೆ ಸಂಬಂಧಿಸಿದಂತೆ, ನಬಾರ್ಡ್‌ನ ಮಾರ್ಗಸೂಚಿಗಳ ಅನ್ವಯ ರಚಿಸಿರುವ ನಿಯಮಾವಳಿಗಳ ಪ್ರಕಾರ ಬ್ಯಾಂಕಿನ ಎಲ್ಲಾ ಸಿಬ್ಬಂದಿಗಳಿಗೆ ಅನ್ವಯವಾಗುವಂತೆ ನೇಮಕಾತಿ ಹಾಗೂ ಪದೋನ್ನತಿ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದೆ. ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಕಲಂ 371(ಜೆ) ಅಡಿಯಲ್ಲಿ ನೌಕರರ ವೃಂದ, ನೇಮಕಾತಿ ಮತ್ತು ಪದೋನ್ನತಿಗೆ ಪ್ರತ್ಯೇಕ ನಿಯಮಗಳು ಇರುವುದಿಲ್ಲ.<br><br>ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತಕ್ಕೆ ಅನುಚ್ಛೇಧ 371(ಜೆ) ಅನ್ವಯಿಸುವಿಕೆಯ ಕುರಿತಂತೆ ಸ್ಪಷ್ಟೀಕರಣ ಕೋರಿ ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ, ಇವರಿಗೆ ಪತ್ರ ಬರೆಯಲಾಗಿತ್ತು. ತತ್ಸಂಬಂಧವಾಗಿ ಸಹಕಾರಿ ಸಂಘ ಸಂಸ್ಥೆಗಳಿಗೆ ಅನುಚ್ಛೇಧ 371(ಜೆ) ಅನ್ವಯವಾಗುವ ಬಗ್ಗೆ ಅಡ್ವೊಕೇಟ್ ಜನರಲ್ ರವರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಸಹಕಾರ ಸಂಘ ಸಂಸ್ಥೆಗಳು ಸರ್ಕಾರದ ನಿಯಂತ್ರಣಕ್ಕೆ ಒಳಪಡದೆ ಇರುವುದರಿಂದ ಸದರಿ ಸಂಸ್ಥೆಗಳಿಗೆ ಅನುಚ್ಛೇಧ 371(ಜೆ) ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆಂದು ಸರ್ಕಾರದ ಅಧೀನ ಕಾರ್ಯದರ್ಶಿಯವರು ಪತ್ರ ಮುಖೇನ ತಿಳಿಸಿರುತ್ತಾರೆ. ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br><br>ಸದರಿ ಮೀಸಲಾತಿಯು ಬ್ಯಾಂಕಿಗೆ ಅನ್ವಯಿಸುವುದಿಲ್ಲ ಎಂದು ಅಪೆಕ್ಸ್ ಬ್ಯಾಂಕ್ ನೌಕರರ ಎಂಪ್ಲಾಯಿಸ್ ಯೂನಿಯನ್ ನವರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್‌ಅರ್ಜಿ ಸಂಖ್ಯೆ.38542/2017 ಇತ್ಯರ್ಥಕ್ಕೆ ಬಾಕಿ ಇರುತ್ತದೆ ಹಾಗೂ ಸದರಿ ರಿಟ್ ಅರ್ಜಿಯ ಇತ್ಯರ್ಥಕ್ಕೊಳಪಟ್ಟು, ಬ್ಯಾಂಕು 2016-17ನೇ ಸಾಲಿನಲ್ಲಿ ನಡೆಸಿದ ಬ್ಯಾಂಕ್ ಸಹಾಯಕರ ವೃಂದದ ನೇಮಕಾತಿಯಲ್ಲಿ ಆಯಾ ಮೀಸಲಾತಿ/ ಸಮತಲ ಮೀಸಲಾತಿಯನ್ನು ಅನುಸರಿಸಿ |

| | | |
|---|---|---|
| | | ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳ ಅಭ್ಯರ್ಥಿಗಳಿಗೆ ಮೀಸಲಾತಿಯನ್ನು ಕಲ್ಪಿಸಿದ್ದು, ಅದರಂತೆ ಬ್ಯಾಂಕಿನಲ್ಲಿ ಒಟ್ಟು 10 ಸಿಬ್ಬಂದಿಗಳು ಬ್ಯಾಂಕ್ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಸದರಿ ನೌಕರರ ವಿವರಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.<br><br>ಆದಾಗ್ಯೂ, ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 471 ಅಧಿಕಾರಿ/ನೌಕರರ ಪೈಕಿ ಹೈದರಾಬಾದ್ ಕರ್ನಾಟಕ ಪ್ರಾಂತಕ್ಕೆ ಸೇರಿದ 34 ಅಧಿಕಾರಿ/ನೌಕರರು ಕಾರ್ಯನಿರ್ವಹಿಸುತ್ತಿರುತ್ತಾರೆ. ಬ್ಯಾಂಕು ಕಾಲಕಾಲಕ್ಕೆ ನೀಡಲಾಗಿರುವ ಪದೋನ್ನತಿಯಲ್ಲಿ ಹೈದರಾಬಾದ್-ಕರ್ನಾಟಕ ಪ್ರಾಂತಕ್ಕೆ ಸೇರಿದ 18 ಸಿಬ್ಬಂದಿಗಳಿಗೆ ವಿವಿಧ ವೃಂದದ ಹುದ್ದೆಗಳಿಗೆ ಪದೋನ್ನತಿ ನೀಡಲಾಗಿರುತ್ತದೆ. ಸದರಿ ನೌಕರರ ವಿವರಗಳನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ.<br><br>ಮುಂದುವರೆದು, ಬ್ಯಾಂಕು 2016-17ನೇ ಸಾಲಿನಲ್ಲಿ ನಡೆಸಿದ ಬ್ಯಾಂಕ್ ಸಹಾಯಕರ ವೃಂದದ ನೇಮಕಾತಿಯಲ್ಲಿ ನೇಮಕಗೊಂಡಿರುವ ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳ ಸಿಬ್ಬಂದಿಗಳು ಮುಂದಿನ ಹುದ್ದೆಗೆ ಪದೋನ್ನತಿ ಹೊಂದಲು ಬ್ಯಾಂಕಿನ ಸೇವಾ ನಿಯಮಾವಳಿಗಳನ್ವಯ ಅವಶ್ಯವಿರುವ ಕನಿಷ್ಠ 06 ವರ್ಷಗಳ ಅರ್ಹ ಸೇವಾವಧಿಯನ್ನು ಪೂರೈಸಿಲ್ಲದಿರುವುದರಿಂದ ಸದರಿಯವರು ಪದೋನ್ನತಿಗೆ ಅರ್ಹರಿರುವುದಿಲ್ಲ. |
| ಆ) | ಈ ಬ್ಯಾಂಕಿನ ಸಿಬ್ಬಂದಿಯನ್ನು ಪದೋನ್ನತಿ ನೀಡಲು ಯಾವ ಮಾನದಂಡ ಅನುಸರಿಸಲಾಗಿದೆ; (ವಿವರ ನೀಡುವುದು) | ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು ಸಿಬ್ಬಂದಿಗಳ ಪದೋನ್ನತಿಗೆ ಸಂಬಂಧಿಸಿದಂತೆ, ನಬಾರ್ಡ್‌ನ ಮಾರ್ಗಸೂಚಿಗಳ ಅನ್ವಯ ರಚಿಸಿರುವ ಮಾನವ ಸಂಪನ್ಮೂಲ ನೀತಿ ಹಾಗೂ ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮಗಳನ್ನು ಅನುಸರಿಸಲಾಗುತ್ತಿದೆ. ವಿವರಗಳನ್ನು **ಅನುಬಂಧ-01 ಮತ್ತು 05** ರಲ್ಲಿ ನೀಡಲಾಗಿದೆ. |
| ಇ) | ಕಲಂ 371(ಜೆ) ಅಡಿಯಲ್ಲಿ ನೇಮಕಾತಿ ಮಾಡಿಕೊಂಡ ನೌಕರರಿಗೆ ಪದೋನ್ನತಿ ನೀಡದಿರಲು ಕಾರಣವೇನು? (ಅಂತಹ ನೌಕರರ ವಿವರ ನೀಡುವುದು) | ಬ್ಯಾಂಕು 2016-17ನೇ ಸಾಲಿನಲ್ಲಿ ನಡೆಸಿದ ಬ್ಯಾಂಕ್ ಸಹಾಯಕರ ವೃಂದದ ನೇಮಕಾತಿಯಲ್ಲಿ ನೇಮಕಗೊಂಡಿರುವ ಹೈದ್ರಾಬಾದ್-ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳ ಸಿಬ್ಬಂದಿಗಳು ಮುಂದಿನ ಹುದ್ದೆಗೆ ಪದೋನ್ನತಿ ಹೊಂದಲು ಬ್ಯಾಂಕಿನ ಸೇವಾ ನಿಯಮಾವಳಿಗಳನ್ವಯ ಅವಶ್ಯವಿರುವ ಕನಿಷ್ಠ 06 ವರ್ಷಗಳ ಅರ್ಹ ಸೇವಾವಧಿಯನ್ನು ಪೂರೈಸಿಲ್ಲದಿರುವುದರಿಂದ ಸದರಿಯವರು ಪದೋನ್ನತಿಗೆ ಅರ್ಹರಿರುವುದಿಲ್ಲ. |

**ಸಂಖ್ಯೆ ಸಿಒ 53 ಸಿಎಲ್‌ಎಸ್ 2022**

(ಎಸ್. ಟಿ. ಸೋಮಶೇಖರ್)

ಸಹಕಾರ ಸಚಿವರು

# SUBSIDIARY RULES

# KSC APEX BANK

# EST SECTION

ಅನುಬಂಧ - 1

..19

10. PROMOTIONS:

i) Promotion to the higher post will be made by the Board of Management on the basis of the following primary considerations ;

a) Seniority in the cadre or grade.

b) Merit or efficiency as revealed in the Service Records and Confidential Reports.

c) Character and conduct and such other relative matters relating to the employees.

ii) All promotions shall be from one cadre to the next higher cadre only.

iii) Promotion to the cadre of Officers in cadre III and above namely Managers, Asst.Gen.Managers/Divisional Officers, Dy. Gen. Managers, and to other Senior Officers posts of General Managers and Additional Secretary shall be by selection after screening only.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕ.ರಾ.ಸ. ಅಪೆಕ್ಸ್ ಬ್ಯಾಂಕ್ ನಿ.,
ಬೆಂಗಳೂರು - 560 018.

ಅನುಬಂಧ - 2

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 46 ಹೈಕಲು 2021

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ 14.12.2021

**ಇವರಿಂದ:**
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
ವಿಧಾನ ಸೌಧ, ಬೆಂಗಳೂರು-560001.

**ಇವರಿಗೆ:**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ,
'ಉತ್ತುಂಗ', ನಂ.1, ಪಂಪ ಮಹಾಕವಿ ರಸ್ತೆ,
ಚಾಮರಾಜಪೇಟೆ,
ಬೆಂಗಳೂರು - 560018

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತಕ್ಕೆ ಅನುಚ್ಛೇಧ 371ಜೆ ಅನ್ವಯವಾಗುವ ಬಗ್ಗೆ ಸ್ಪಷ್ಟೀಕರಣ ಕೋರಿರುವ ಕುರಿತು

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಮುಕಾನಿ/ಸಿವಿ/ಕ.ಕ/2978/2021-22, ದಿನಾಂಕ 25.11.2021.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಕಡೆಗೆ ಗಮನಸೆಳೆಯಲಾಗಿದೆ. ಈ ಹಿಂದೆ ಸಹಕಾರಿ ಸಂಘ ಸಂಸ್ಥೆಗಳಿಗೆ ಅನುಚ್ಛೇಧ 371ಜೆ ಅನ್ವಯವಾಗುವ ಬಗ್ಗೆ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಸಹಕಾರ ಸಂಘ ಸಂಸ್ಥೆಗಳು ಸರ್ಕಾರದ ನಿಯಂತ್ರಣಕ್ಕೆ ಒಳಪಡದೆ ಇರುವುದರಿಂದ ಸದರಿ ಸಂಸ್ಥೆಗಳಿಗೆ **ಅನುಚ್ಛೇಧ 371ಜೆ ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.** ಆದರೆ ಈಗಾಗಲೆ ಕೆಲವು ಸಹಕಾರ ಸಂಸ್ಥೆಗಳಲ್ಲಿ **ಅನುಚ್ಛೇಧ 371(ಜೆ) ರನ್ವಯ ಮೀಸಲಾತಿ ನಿಗಧಿಪಡಿಸಿ ನೇರ ನೇಮಕಾತಿ ಹಾಗೂ ಮುಂಬಡ್ತಿಗಳನ್ನು ನೀಡಲಾಗಿರುವ ಹಿನ್ನಲೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲು ಸದರಿ ವಿಷಯವನ್ನು ಸಚಿವ ಸಂಪುಟ ಉಪ ಸಮಿತಿ ಮುಂದೆ ಮಂಡಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಸದರಿ ವಿಷಯವನ್ನು ಈ ಹಿಂದೆ ನಡೆದ ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದ್ದು, ಈ ವಿಷಯದ ಮೇಲೆ ಯಾವುದೇ ನಿರ್ಣಯ ತೆಗೆದುಕೊಳ್ಳದೆ ಮುಂದೂಡಲಾಗಿರುತ್ತದೆ.** ಈ ಹಿನ್ನಲೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯು ಕೈಗೊಳ್ಳುವ ನಿರ್ಣಯದಂತೆ ಕ್ರಮವಹಿಸುವ ಷರತ್ತಿಗೊಳಪಟ್ಟು ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಬಹುದಾಗಿದೆಯೆಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

Harish 14/12/21
(ಹರೀಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕ.ರಾ.ಸ. ಅಪೆಕ್ಸ್ ಬ್ಯಾಂಕ್ ನಿ.,
ಬೆಂಗಳೂರು – 560 018.

ಅನುಬಂಧ–3

## 2016ನೇ ಸಾಲಿನ ಬ್ಯಾಂಕ್ ಸಹಾಯಕರ ನೇಮಕಾತಿಯಲ್ಲಿ ಆಯ್ಕೆಗೊಂಡ ಹೈದರಾಬಾದ್ ಕರ್ನಾಟಕ ವ್ಯಾಪ್ತಿಗೆ ಒಳಪಡುವ ಅಭ್ಯರ್ಥಿಗಳ ಪಟ್ಟಿ

| ಕ್ರಮ ಸಂಖ್ಯೆ | ಹೆಸರು |
|---|---|
| 1 | ಶ್ರೀ ಬಾಬು |
| 2 | ಶ್ರೀ ಮಲ್ಲಪ್ಪ |
| 3 | ಶ್ರೀ ವೀರನಗೌಡ ಡಿ.ಪಾಟೀಲ್ |
| 4 | ಶ್ರೀ ಸಂತೋಷ |
| 5 | ಶ್ರೀ ಶಶಿಕುಮಾರ ನಿಡಗುಂದಿ |
| 6 | ಶ್ರೀ ಮಾರಪ್ಪ ಹೆಚ್ |
| 7 | ಶ್ರೀಮತಿ ಸ್ವಾತಿ ಬಿ |
| 8 | ಶ್ರೀ ಶ್ರೀನಿವಾಸ ಟಿ |
| 9 | ಶ್ರೀ ಗುರುದೇವ |
| 10 | ಶ್ರೀ ವಿದ್ಯಾಸಾಗರ |

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕ.ರಾ.ಸ. ಅಪೆಕ್ಸ್ ಬ್ಯಾಂಕ್ ನಿ.,
ಬೆಂಗಳೂರು – 560 018.

ಅನುಬಂಧ-4

## ಬ್ಯಾಂಕಿನಲ್ಲಿ ಹೈದರಾಬಾದ್ ಕರ್ನಾಟಕ ವ್ಯಾಪ್ತಿಗೆ ಒಳಪಡುವ ಪದೋನ್ನತಿ ಹೊಂದಿದ ಸಿಬ್ಬಂದಿಗಳ ವಿವರ

| ಕ್ರಮ ಸಂಖ್ಯೆ | ಹೆಸರು |
|---|---|
| 1 | ಶ್ರೀ ಯೆರಿಸ್ವಾಮಿ ರೆಡ್ಡಿ ಕೆ |
| 2 | ಶ್ರೀ ಬಸವರಾಜ ಎಸ್ ಸಜ್ಜನ |
| 3 | ಶ್ರೀಮತಿ ಶಿವಲೀಲಾ |
| 4 | ಶ್ರೀ ಆದೆಪ್ಪ |
| 5 | ಶ್ರೀ ಪ್ರವೀಣಕುಮಾರ್ ತಂದೆ ಶಿವಣ್ಣ |
| 6 | ಶ್ರೀ ಚನ್ನಬಸಪ್ಪ |
| 7 | ಶ್ರೀ ಸದಾನಂದ ರೆಡ್ಡಿ |
| 8 | ಶ್ರೀಮತಿ ಜ್ಯೋತಿ ತಂದೆ ನಾಗರೆಡ್ಡಿಗೌಡ |
| 9 | ಶ್ರೀಮತಿ ಶೈಲಜಾ ಎಸ್ |
| 10 | ಶ್ರೀ ಶರಣಪ್ಪ ತಂದೆ ಭೀಮರಾಯ |
| 11 | ಶ್ರೀ ಶರಣಪ್ಪ ತಂದೆ ಕೆ.ಆರ್ ಶೆಟ್ಟಿ |
| 12 | ಶ್ರೀ ಸಿದ್ಲಿಂಗಪ್ಪ ಬಿ |
| 13 | ಶ್ರೀ ಸಂಗಮೇಶ್ ಡಂಬಳ |
| 14 | ಶ್ರೀ ಶರಣಪ್ಪಗೌಡ |
| 15 | ಶ್ರೀ. ಕತ್ತೆ ಬೆನ್ನೂರು ರಾಜಶೇಖರ ಗೌಡ |
| 16 | ಶ್ರೀ ವೀರೇಶ್ |
| 17 | ಶ್ರೀ ಮಂಜುನಾಥ ಜೇವಣ್ಣವರ್ |
| 18 | ಶ್ರೀ ಈರಪ್ಪ ಕಡದಳ್ಳಿ |

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕ.ರಾ.ಸ. ಅಪೆಕ್ಸ್ ಬ್ಯಾಂಕ್ ನಿ.,
ಬೆಂಗಳೂರು - 560 018.

# ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ

"ಉತ್ತುಂಗ", ನಂ.೧, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮.
(ಷೆಡ್ಯೂಲ್ಡ್ ಬ್ಯಾಂಕ್)

## ಮಾನವ ಸಂಪನ್ಮೂಲ ನೀತಿ (HUMAN RESOURCE POLICY)

## ಸಿಬ್ಬಂದಿ ವೃಂದ ಮತ್ತು ನೇಮಕಾತಿ ನಿಯಮಗಳು

ಅನುಬಂಧ-(5)

ಅನುಬಂಧ - 5

## VI. ಪದೋನ್ನತಿ ನಿಯಮಗಳು :

1) ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಪ್ರತಿ ವರ್ಷದ ಆರಂಭದಲ್ಲಿ ಹಾಲಿ ಇರುವ ಖಾಲಿ ಸ್ಥಾನಗಳೊಂದಿಗೆ ಹಾಗೂ ಸದರಿ ವರ್ಷಾಂತ್ಯಕ್ಕೆ ವಿವಿಧ ದರ್ಜೆಯ ಹುದ್ದೆಗಳಲ್ಲಿ ಸಂಭಾವ್ಯ ಖಾಲಿ ಸ್ಥಾನಗಳನ್ನು ಪಟ್ಟಿಮಾಡಿ, ಪರಾಮರ್ಶನ ಸಮಿತಿ ಸಭೆ ಕರೆದು ಮಂಡಿಸತಕ್ಕದ್ದು.

2) ಪದೋನ್ನತಿಗಾಗಿ ಅಭ್ಯರ್ಥಿಗಳ ಸೇವಾ ಹಿರಿತನ ಹಾಗೂ ಹಿಂದಿನ ಮೂರು ವರ್ಷಗಳ ತೃಪ್ತಿಕರ ಸೇವೆ, ಕಾರ್ಯದಕ್ಷತೆ, ನಿಷ್ಠೆ ಈ ಎಲ್ಲಾ ಅಂಶಗಳನ್ನು ಅವಲೋಕಿಸಿ ಅರ್ಹ ಅಭ್ಯರ್ಥಿಗಳನ್ನು 1:2ರ ಅನುಪಾತದಂತೆ ಬ್ಯಾಂಕಿನ ಪರಾಮರ್ಶನ ಸಮಿತಿ ಮುಂದೆ ಸಂದರ್ಶನಕ್ಕೆ ಹಾಜರುಪಡಿಸಿ, ಪದೋನ್ನತಿ ನೀಡುವ ಸಂಬಂಧ ಬ್ಯಾಂಕಿನ ಆಡಳಿತ ಮಂಡಳಿ ಸಭೆಯ ಅನುಮೋದನೆ/ಅನುಸಮರ್ಥನೆ ಪಡೆಯುವುದು.

3) ಅರ್ಹ ನೌಕರರ ಉತ್ತಮ ನಡತೆ ಮತ್ತು ಕಾರ್ಯ ದಕ್ಷತೆಗಳನ್ನು ನಿರ್ಧರಿಸುವ ಸಲುವಾಗಿ ನೌಕರನ/ಳ ಕಳೆದ 3 ವರ್ಷಗಳ ಅಥವಾ ಅವರೆಗಿನ ಸೇವೆ ಸಲ್ಲಿಸಿದ ಅವಧಿಯಲ್ಲಿ (ಎರಡರಲ್ಲಿ ಯಾವುದು ಕಡಿಮೆಯೋ ಅದು) ಗೋಪ್ಯ ವರದಿ, ಸೇವಾ ದಾಖಲೆಗಳನ್ನು ಪರಿಶೀಲಿಸತಕ್ಕದ್ದು. ಹೀಗೆ ಪರಿಶೀಲಿಸಲ್ಪಟ್ಟ ಸೇವಾವಧಿಯಲ್ಲಿ ಪ್ರತಿಕೂಲ ಗೋಪ್ಯ ವರದಿ ಹೊಂದಿರುವ ಅಥವಾ ಗಂಭೀರ ಶಿಸ್ತು ಕ್ರಮಕ್ಕೊಳಗಾಗಿರುವ ನೌಕರರ ಪದೋನ್ನತಿಯನ್ನು ಸಕಾರಣ ದಾಖಲಿಸಿ ತಡೆಹಿಡಿಯುವ ಅಧಿಕಾರ ಪರಾಮರ್ಶನ ಸಮಿತಿಗಿರುತ್ತದೆ.

4) ಕಾನೂನು ಪ್ರಕ್ರಿಯೆ/ಆಂತರಿಕ ವಿಚಾರಣೆ ಎದುರಿಸುತ್ತಿರುವ ನೌಕರರ ಪದೋನ್ನತಿ ಬಗ್ಗೆ ಬ್ಯಾಂಕಿನ ಸೇವಾ ನಿಯಮಾವಳಿ/ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ:ನಿಯಮ/ಸರ್ಕಾರದ ಸೇವಾ ನಿಯಮಗಳನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳತಕ್ಕದ್ದು.

5) ಪದೋನ್ನತಿ ಪಡೆದ ಓರ್ವ ನೌಕರನ/ಳ ಕಾರ್ಯ ಹಾಗೂ ವರ್ತನೆಗಳು ಪದೋನ್ನತಿಗೊಂಡ ಹುದ್ದೆಯಲ್ಲಿ ಅತೃಪ್ತಿಕರವೆಂದು ಕಂಡು ಬಂದಲ್ಲಿ ನೌಕರನು/ಳು ಅಂತಹ ಹುದ್ದೆಯಿಂದ ಹಿಂಬಡ್ತಿ ಹೊಂದಲು ಬದ್ಧನಾಗಿರುತ್ತಾನೆ/ಳೆ

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕ.ರಾ.ಸ. ಅಪೆಕ್ಸ್ ಬ್ಯಾಂಕ್ ನಿ.,
ಬೆಂಗಳೂರು - 560 018.